

ನಂತರದಲ್ಲಿ ಯಾವ ಪದವನ್ನು ಬಳಸಬೇಕೆಂಬ ಗೊಡವೆಗೆ ಆ ಮಗು ಹೋಗುವುದಿಲ್ಲ. ಕ್ರಮೇಣ 3 ವರ್ಷದ ಆಸುಪಾಸಿನಲ್ಲಿ ಮಕ್ಕಳು ಕ್ರಿಯಾಪದಗಳ ಜೋಡಣೆ ಮತ್ತು ನಾಮಪದಗಳ ಬಳಕೆ ಇತರೆ ವ್ಯಾಕರಣ ಸಹಿತ ವಾಕ್ಯಗಳನ್ನು ತಪ್ಪಿಲ್ಲದೆ ತಯಾರು ಮಾಡುವಲ್ಲಿ ನಿಸ್ಸೀಮರಾಗಿಬಿಡುತ್ತಾರೆ.

## ಪೋಷಕರ ಸಹಕಾರ

ಮಕ್ಕಳ ಬುದ್ಧಿ ವಿಕಸನದ ಜೊತೆ ಜೊತೆಯಲ್ಲಿ ಮಕ್ಕಳ ಮಾತನಾಡುವ ಸಾಮರ್ಥ್ಯಕ್ಕೂ ಪೋಷಕರ ಸಹಕಾರದ ಅವಶ್ಯಕತೆ ಇರುತ್ತದೆ. ಹೆಚ್ಚಿನ ಚುರುಕು ಬುದ್ಧಿ ಇದ್ದರೂ ಕೆಲವೊಮ್ಮೆ ಕೆಲವು ಮಕ್ಕಳು ಕಡಿಮೆ ಮಾತು ಅಥವಾ ಸಂವಹನ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಮಕ್ಕಳು ಮೂಲತಃ ಕಿವಿಯಿಂದ ಕೇಳಿ ಅಥವಾ ನಮ್ಮ ಮುಖ ಭಾವವನ್ನು ಆಲಿಸಿ/ನೋಡಿ ಅನುಕರಣೆ ಮಾಡುವುದರಿಂದ, ನಾವು ಮಕ್ಕಳೊಂದಿಗೆ ಅವರ ಹುಟ್ಟಿನ ಸಮಯದಿಂದಲೂ ಸಂವಹನ ನಡೆಸುವುದು ಅತ್ಯಂತ ಉಪಯೋಗಕಾರಿ.

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ನಾವು ಮಕ್ಕಳೊಂದಿಗೆ ಮಾತನಾಡುವಾಗ ನಮ್ಮ ಮುಖ ಅವರಿಗೆ ಗೋಚರಿಸುವಂತಿರಬೇಕು. ಮಕ್ಕಳ ಮಟ್ಟಕ್ಕೆ ಮಂಡಿಯೂರಿ ಕುಳಿತು, ನಾವು ಅವರಿಗೆ ತಿಳಿಸಬೇಕಾದ ವಿಷಯವನ್ನು, ನಿಧಾನವಾಗಿ ತಿಳಿಸಿದರೆ, ಮಕ್ಕಳಿಗೆ ಬಲು ಬೇಗ ನಾವು ಹೇಳಿದುದು ಮನನವಾಗುವುದು. ಚಿಕ್ಕ ಮಕ್ಕಳ ಜೊತೆ ಮಾತನಾಡಲು ಬಳಸುವ ವಾಕ್ಯಗಳು ಚಿಕ್ಕದಾಗಿರಲಿ, ಕೊಡುವ ಸೂಚನೆಗಳು ಆದಷ್ಟು ಸರಳವಾಗಿರುವುದರ ಜೊತೆಗೆ ಸಾಧ್ಯವಾದಷ್ಟು ಕೈ ಸನ್ನೆ ಬಳಸಿದರೆ, ಮಕ್ಕಳಿಗೆ ನೀವು ಕೊಟ್ಟ ಸೂಚನೆಗಳನ್ನು ಪಾಲಿಸಲು ಸುಲಭವಾಗುವುದು.

ಉದಾಹರಣೆಗೆ, 'ಆ ನಿನ್ನ ಟಾಯ್ಸ್ ತೆಗೆದಿಡು' ಎಂದು ಬೆನ್ನು ಮಾಡಿ ಯಾವುದೋ ಕೆಲಸ ಮಾಡುತ್ತಾ ಹೇಳುವುದಕ್ಕಿಂತ, ಕೈ ಮಾಡಿ ತೋರಿಸಿ, 'ನಿನ್ನ ಈ ಟಾಯ್ಸ್ ಎತ್ತಿಟ್ಟುಕೊಳ್ಳಬಹುದೇ?' ಎಂದು ಕೇಳಿದರೆ, ಮಕ್ಕಳಿಗೆ ನೇರ ಮಾರ್ಗದರ್ಶನ ಸಿಕ್ಕಂತಾಗುತ್ತದೆ.

ಹೊಸ ಪದ, ಹೊಸ ವಿಷಯಗಳನ್ನು ಕೇಳಿದಾಗ, ಮಕ್ಕಳು ಅದನ್ನರಿಯುವ ಕುತೂಹಲಕ್ಕಾಗಿ ಪುನಃ ನಮ್ಮ ಮುಖವನ್ನು ಗಮನಿಸುತ್ತಿರುತ್ತಾರೆ, ಇಲ್ಲವೇ ತಾವು ಪುನರಾವರ್ತಿಸಲು ಪ್ರಯತ್ನಿಸುತ್ತಿರುತ್ತಾರೆ. ಅಂತಹ ಸಮಯದಲ್ಲಿ ಮಕ್ಕಳ ಸಂಶಯವನ್ನು ಗಮನಿಸಿ, ಶಬ್ದಗಳನ್ನು ಪುನರಾವರ್ತಿಸಿ. ಪದಗಳ ಉಚ್ಚಾರಣೆಯ ಏರಿಳಿತವನ್ನು ನಿಧಾನವಾಗಿ ಹೇಳಿ ತಿಳಿಸಿ. ಅದರಲ್ಲೂ ಮುಖ್ಯವಾಗಿ ಮಕ್ಕಳ ತಪ್ಪನ್ನು ಹಳಿಯಬೇಡಿ. ಮಕ್ಕಳ ಮಾತಿಗೆ ಗೌರವಿಸಿ.

ಮಕ್ಕಳಿಗೆ ತಾವು ಕಲಿತುದರ ಬಗ್ಗೆ ತಿಳಿಸುವ ಕುತೂಹಲವಿರುತ್ತದೆ. ದಿನದಲ್ಲಿ ಸ್ವಲ್ಪ ಸಮಯ ಅವರಿಗಾಗಿಯೇ ಮೀಸಲಿಟ್ಟು, ಆದಷ್ಟು ಪ್ರಶ್ನೆಗಳನ್ನು ಕೇಳದೆ, ಕೇವಲ ಕೇಳುಗರಾಗಿ, ಅವರ ಕುತೂಹಲಕ್ಕೆ ಪ್ರತಿಕ್ರಿಯೆ ನೀಡಿ. 3 ವರ್ಷಕ್ಕೂ ಮೇಲ್ಪಟ್ಟ ಮಕ್ಕಳಿಗೆ ಸಾಮಾನ್ಯ ವಿಷಯಗಳನ್ನು ತಿಳಿಸುವಾಗ, ಮುಖ್ಯ ವಿಷಯ ವಸ್ತುವಿಗೆ ಒಂದಕ್ಕಿಂತ ಹೆಚ್ಚಿನ ಅರ್ಥವಿದ್ದರೆ, ಅವುಗಳನ್ನು ತಿಳಿಸಿ. ಸಮಾನಾರ್ಥಕ ಪದಗಳನ್ನೂ ಆಗಾಗ್ಗೆ ಬಳಸುತ್ತಿರಿ. ಮಗುವಿನ ಶ್ರವಣ ಶಕ್ತಿ, ಪ್ರತಿಕ್ರಿಯೆ ನೀಡುವ ಬಗೆ, ವಾಕ್ ಸಾಮರ್ಥ್ಯದ ಬಗ್ಗೆ ಗಮನವಿರಲಿ.

ಮಕ್ಕಳೊಂದಿಗೆ ಕುಳಿತು ಸ್ವಲ್ಪ ಸಮಯ ಯಾವುದೇ ಪುಸ್ತಕವನ್ನು ಓದಿಸಿ. ಅದು ಕಥೆ ಪುಸ್ತಕವಾದರೆ ಒಳ್ಳೆಯದೇ. ಇದರಿಂದ ಓದುವ ಕ್ರಿಯೆಯಲ್ಲಿ ಏನಾದರೂ ದೋಷವಿದೆಯೇ, ಮಗುವಿಗೆ ಯಾವುದು ತಿಳಿಯಲು ಕಷ್ಟವಾಗುತ್ತಿದೆ ಎಂಬಿತ್ಯಾದಿ ವಿಷಯಗಳು ನಮಗೆ ತಿಳಿಯುತ್ತದೆ. ಮಕ್ಕಳಿಗೆ ಸರಿಯಾದ ಶಬ್ದ ಉಚ್ಚಾರದ ಕಡೆಗೆ ಆದಷ್ಟು ಮಾರ್ಗದರ್ಶನ ಮಾಡಿ. ಉದಾಹರಣೆಗೆ– ಹೌದು ಎನ್ನಲು ಔದು, ಶಂಖ ಎನ್ನಲು ಸಂಕ, ಇತ್ಯಾದಿ. ಒಟ್ಟಿನಲ್ಲಿ ನಮ್ಮ ಮಕ್ಕಳ ಭಾಷಾ ಕಲಿಕೆಗೆ, ಅವರ ಕಲಿಕೆಯ ವೈವಿಧ್ಯತೆಗೆ ನಮ್ಮ ಬೆಂಬಲವಿರಲಿ.